ಕನ್ನಡಪ್ರಭ

Monday, July 25th, 2011

# ಮನಸೆಳೆದ ಶ್ವಾನ ಪ್ರದರ್ಶನ



ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಶ್ವಾನ ಪ್ರದರ್ಶನದಲ್ಲಿ ಭಾಗವಹಿಸಿದ್ದ ನಾಯಿಗಳನ್ನು ಪ್ರದರ್ಶಿಸುತ್ತಿರುವ ಮಾಲೀಕರು.

**ಬೆಂಗಳೂರು:** ಯಾವತ್ತೂ ಶಾಲಾ ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಭೆ ಸಮಾರಂಭ ನಡೆಯುತ್ತಿದ್ದ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಭಾನುವಾರ ವಿಶೇಷ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಭಾಗವಹಿಸಿ ಜನಾಕರ್ಷಣೆಯ ಕೇಂದ್ರವಾಗಿ ರಂಜಿಸಿದ್ದು ವಿವಿಧ ತಳಿಯ ಶ್ವಾನಗಳು. ಇದು ಜೈನ್ ವಿವಿಯ ಸಾಂಸ್ಕೃತಿಕ ವೇದಿಕೆ ಏರ್ಪಡಿಸಿದ್ದ 'ಶ್ವಾನ ಪ್ರದರ್ಶನ' ಕಾರ್ಯಕ್ರಮ.

ಪ್ರಾಣಿ ಪ್ರೀತಿ ಹೆಚ್ಚಿಸುವ ಸಲುವಾಗಿ ಏರ್ಪಡಿಸಿದ್ದ ಈ ಪ್ರದರ್ಶನದಲ್ಲಿ 70 ವಿವಿಧ ತಳಿಯ ಶ್ವಾನಗಳು ತಮ್ಮ ಮಾಲೀಕರ ಮಾರ್ಗದರ್ಶನದಂತೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಜನರನ್ನು ರಂಜಿಸಿದ್ದಲ್ಲದೆ, ಮೆಚ್ಚುಗೆಯನ್ನೂ ಪಡೆದವು.

ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಕರುಣಾ ಪ್ರಾಣಿ ದಯಾ ಸಂಘದ ಅಮೃತ್ ಎಸ್. ಹಿರಣ್ಯ, ಹಲವು ವರ್ಷಗಳಿಂದ ಶ್ವಾನ ಪ್ರದರ್ಶನ ಹಮ್ಮಿಕೊಳ್ಳುತ್ತಿರುವುದರಿಂದ ಜನರಲ್ಲಿ ಪ್ರಾಣಿ ಪ್ರೀತಿ ಹೆಚ್ಚಿದೆ ಎಂದರು.

ನಗರದಲ್ಲಿ ಬೀದಿ ನಾಯಿಗಳು ಹೆಚ್ಚಿದ ಹಿನ್ನೆಲೆಯಲ್ಲಿ ಪಾಲಿಕೆ ಎಲ್ಲ ಬೀದಿ ನಾಯಿಗಳನ್ನು ಸಾಯಿಸಲು ಹೊರಟಿರುವುದು ಸರಿಯಲ್ಲ.

ಅದರ ಬದಲು ಸಂತಾನಹರಣದಂತಹ ಪರ್ಯಾಯ ಮಾರ್ಗವನ್ನು ಅನುಸರಿಸಬೇಕು. ಇದರಿಂದ ಕಳೆದ ನಾಲ್ಕು ವರ್ಷಗಳಿಂದ ರೇಬಿಸ್ ರೋಗ ಗಣನೀಯವಾಗಿ ತಗ್ಗಿದೆ ಎಂದರು.

**ಶ್ವಾನಸ್ಪರ್ಧೆ:** ಇಲ್ಲಿ ಶ್ವಾನಗಳಿಗಾಗಿ ಆಕರ್ಷಕ ನೋಟ, ವಿಧೇಯತೆ, ಉಡುಗೆ– ತೊಡುಗೆ ಸೇರಿದಂತೆ ಐದು ವಿಭಾಗಗಳಲ್ಲಿ ಪ್ರದರ್ಶನ ಏರ್ಪಡಿಸಲಾಗಿತ್ತು. ಸ್ಪರ್ಧೆಗಳಲ್ಲಿ ಗೆದ್ದ ಶ್ವಾನಗಳ ಮಾಲೀಕರಿಗೆ ಬಹುಮಾನ ವಿತರಿಸಲಾಯಿತು. ತೀರ್ಪುಗಾರರಾಗಿ ಪ್ರಾಣಿ ತಜ್ಞರಾದ ಅಮೃತ್ ಎಸ್. ಹಿರಣ್ಯ ಮತ್ತು ಡಾ. ಚಂದ್ರಯ್ಯ ಭಾಗವಹಿಸಿದ್ದರು.